H90

ತುಮಕೂರು ಡಿಸ್ಟ್ರಿಕ್ಟು.

ಪ್ರಕಟನೆ.

ಇದರಡಿ ಕಂಡ ಡಿಪೋಬಳಿಗೆ ಅದರ ಯದುರಾಗಿ ಕಾಣಿಸಲ್ಪಟ್ಟ ಜಂಗಲ್‌ಗಳಿಂದ ನಾಟೂಗಳನ್ನ ತಯಾರಮಾಡಿ ಬಿದರು ಕಡದು ಸವುದೆ ಕತಂಯಿಸಿ ಸಾಗಿಸುವದಕ್ಕು ಚಿಲ್ಲರೆ ಪಸಾರೆ ಜಿನಸುಗಳನ್ನ ಜಮಾಯಿಸಿ ಸಾಗಿಸುವದಕ್ಕು ಅಥವಾ ಸಾಗಿಸುವದಕ್ಕೆ ಮಾತ್ರ ವೆ ಆಗಲಿ 1890ನೇ ಜುಲೈ 31ನೇ ತಾರೀಖು ವಳಗಾಗಿ ಯಿಷ್ಟವುಳ್ಳವರು " ಟೆಂಡರ್" ಯಾನೆ ದರಖಾಸ್ತು ಕೊಡಬಹುದು.

ತಾಲ್ಲೂಕು.	ಫಾರೆಸ್ಟು.	ಡಿಪೊ ಹೆಸರು.
ಮದ್ದಗಿರಿ ..	ಮದ್ದಗಿರಿ ಸ್ಟೇಟ್ ಫಾರೆಸ್ಟು	ಮದ್ದಗಿರಿ ಡಿಪೊ
ಡಿಟೋ ..	ಡಿಟೋ ಡಿಟೋ	
ತಿರು ..	ಬುಕ್ಕಾಪಟ್ಟಣ ಡಿಟೋ	ತುಮಕೂರು ಡಿಪೊ
ಕುಣಿಗಲ್ ..	ಹುಲಿಯೂರು ದುರ್ಗ ಡಿಟೋ	ಜಿಪ್ಸಿ ಪಸಾರೆ ಜಿ ಜ ಸ ನಾಯಿನಿ ಸಾರೆ ನ ಡ ದು ದ ಕ ಣ ಗ
ತುಮಕೂರು ..	ದೇವರಾಯದುರ್ಗ ಸ್ಟೇಟ್ ಫಾರೆಸ್ಟು ಮತ್ತು ಡಿಸ್ಟ್ರಿಕ್ಟು ಜಂಗಲ್‌ಗಳು	

2. ಪ್ರತಿ ಬಂದು ದರಖಾಸ್ತನ್ನ ಲಕೋಟೆ ಮೇಲೆಯು "ಇಂಥಾ ಜಂಗಲ್‌ನಿಂದ ಇಂಥಾ ಡಿಪೊಕ್ಕೆ ತಯಾರಿಯಿಂದ ಹೇರಿತಂದ್ದು ಕೊಡುವ ಯಾ ಹೇರಿ ತರುವ ಮಟ್ಟಿಗೆ ಯಾ ಜಮಾಯಿಸಿ ಹೇರಿತರುವ ಬಗ್ಯೆ ದರಖಾಸ್ತು" ಯಂದು ಬರದು ರವಾನಿಸತಕ್ಕದ್ದು.

3. ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು 31ನೇ ಜುಲೈವರಿಗೆ ದರಖಾಸ್ತುಗಳನ್ನ ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗಲ್‌ಗಳಿಂದ ಬಂದು ಜಂಗಲ್‌ಗಿಂತ ಹೆಚ್ಚಾದ ಜಂಗಲ್‌ಗಳಿಂದ ತಯಾರಿಯಿಂದ ನಾಟುಗಳನ್ನ ಮತ್ತು ಬಿದರು ಸವುದೆ ಚಿಲ್ಲರೆ ಪಸಾರೆ ಜಿನಸುಗಳನ್ನು ರಫ್ತು ಮಾಡುವದಕ್ಕೆ ದರಖಾಸ್ತು ಕೊಡುವ ಪಕ್ಷವಲ್ಲಿ ಯಷ್ಟು ಕಮ್ಮಿದರಗಳಿಗೆ, ಮೇಲೆ ಹೇಳಿದ ಜಂಗಲ್‌ಗಳಿಂದ ನಾಟುಗಳನ್ನು ಬಿದರು ಮತ್ತು ಸವುದೆ ಪಸಾರೆ ಜಿನಸು ಕೊಡವು ತಯಾರಿ ಯಾ ಜಮಾವಣೆಯಿಂದಾ ಯಾವ ಯಾವ ಡಿಪೊಗಳಿಗೆ ರಫ್ತು ಮಾಡುವದಕ್ಕೆ ಆಗುತ್ತೋ ಅದನ್ನ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟೂ ಮತ್ತು ಬಿದರು ತಯಾರಿ ಯಿದುವರಿಗು ಡಿಸ್ಟ್ರಿಕ್ಟ್‌ನಲ್ಲಿ ಜಾರಿಯಿರುವ ಪೂಮೂಲನಂತೆ ಯಿರಬೇಕು. ಕಡಿದು ತಕ್ಕ ಮರಗಳನ್ನ ಯಿಲಾಖೆಯಿಂದ ಗುರ್ತು ಮಾಡಲ್ಪಡುತ್ತೆ.

5. ನಾಟೂಗಳ ವಿಚಾರದಲ್ಲಿ ಸಲೆ ಅಡಿ ಮಟಕ್ಕೆ ಯಿಷ್ಟರಂತೆ ಯಂತಲು ಸಾಗುವಾನಿ ಸಂಣ ತೀರುಗಳು ಜಂತೆಗಳ ವಿಚಾರದಲ್ಲಿ ಗಾಡಿ ಬೋಜಾಕ್ಕೆ ಯಿಷ್ಟರಂತೆ ಯಂತ್ತಲು ನಮೂದಿಸಬೇಕು (ಗಾಡಿ ಬೋಜಾ ಅಂದರೆ ಸಂಣ ತೀರುಗಳು ಜಂತೆಗಳು ಆದರೆ 28 ಸಲೆಅಡಿಗಳು ಹೆಬ್ಬಿದರು ಆದರೆ 25 ಸಂಖೆ ಮೇದರು ಬಿದರು ಆದರೆ 150 ಸಂಖೆ ಕಿರಬಿದರು ಆದರೆ 200 ಸಂಖೆ ಈ ಮೇರಿಗೆ ಅನ್ವಯಿಸಬೇಕು).

6. ಸಾದೇ ವಿಚಾರದಲ್ಲಿ ಗಾಡಿ ಬೋಜಾ ಕಡಿಯುವದಕ್ಕೆ ಯಿಷ್ಟೆಂತಲು (ಗಾಡಿ ಬೋಜಾ ವಣಿಗಿರತಕ್ಕ ಸವುದೆ 40 ಮಣಕ್ಕೆ ಕಮ್ಮಿ ಯಿಲ್ಲದೆ ಯಿರಬೇಕು) ಸಾಗಿಸುವದಕ್ಕೆ ಮೈಲಿ ವಂದಕ್ಕೆ ಯಿಷ್ಟೆಂತಲು ಯಿದೇ ಮೇರಿಗೆ ಪಸಾರೆ ಜಿನಸು ಜಮಾಯಿಸಿ ಸಾಗಿಸುವದಕ್ಕೆ ಸಹ ನಮೂದಿಸಬೇಕು.

7. ದರಖಾಸ್ತು ಅಂಗೀಕರಿಸಲ್ಪಟ್ಟ ಪ್ರತಿ ಒಬ್ಬ ಕಂಟ್ರಾಕ್ಟುದಾರ್ರು) ಯಾ ಕಂಟ್ರಾಕ್ಟುದಾರ್ರುಗಳು ಮೇಲ್ಕಂಡ ಸಾಮಾನುಗಳನ್ನ ತಯಾರಿಯಿಂದ ಯಾ ಜಮಾವಣೆಯಿಂದ ಮೇಲೆ ನಮೂದಿಸಿರುವ ಡಿಪೋಗಳಿಗೆ ಪೂಹೆಯ್ಯಾನಾ ಇಲಾಖೆಯಿಂದ ಕೊಡಲ್ಪಡುವ ಅಂದಾಜುಗಳಂತೆ ನಡಸುವದಕ್ಕೆ ಬದ್ಧರಾಗಿರಬೇಕು.

8. ದರಖಾಸ್ತು ಅಂಗೀಕರಿಸಲ್ಪಟ್ಟ ಪ್ರತಿ ಒಬ್ಬ ಕಂಟ್ರಾಕ್ಟರು ಅವರು ಕ್ರಮವರಿತು ಕಂಟ್ರಾಕ್ಟು ಮಂಜೂರಾದ ವಂದು ವಾರದ ವಳಗಾಗಿ ಬರದುಕೊಡಬೇಕಾಗುವ ಮುಚ್ಚಳಿಕೆ ಅನುಸರಿಸಿ ಕೆಲಸ ನಡಸತಕ್ಕ ಖಾತರೀ ಬಗ್ಯಾಗಿ ಪ್ರತಿ ವಂದು ಜಂಗಲಿಗೆ 300 ರೂಪಾಯಿಗಳನ್ನು ಠೇವಣಿ ಯಿಡಬೇಕು.

9. ಕೇವಲ ಕಮ್ಮಿದರಕ್ಕೆ ಕೊಟ್ಟಿರುವ ದರಖಾಸ್ತುಗಳನ್ನೇ ಆಗಲಿ ಮತ್ತಾವ ತರಹಾವ ದರಖಾಸ್ತುಗಳನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಬದ್ಧರಾಗಿರುವದಿಲ್ಲ, ದರಖಾಸ್ತು ವಪ್ಪಿತವು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

10. ಮೇಲೆ ಹೇಳಿರುವ ತಪಸೀಲ್ ಅಲ್ಲದೆ ಜಾಸ್ತಿ ಅಂಶಗಳನ್ನ ತಿಳಿಯಬೇಕೆಂದು ಅಪೇಕ್ಷಿಸಿದಲ್ಲಿ ಆ ತಪಸೀಲುಗಳು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಆಫಿಸಿನಲ್ಲಿ ದೊರೆಯುತ್ತೆ.

ಬಿ. ಶ್ರೀನಿವಾಸರಾವ್,
ಸಬ್ ಅಸಿಸ್ಟೆಂಟ್ ಕಂಜರ್ವೇಟರ್.